# ಸಂಬಾರ ಪದಾರ್ಥಗಳ ಮಂಡಲಿ ಅಧಿನಿಯಮ, 1986

(1986ರ ಅಧಿನಿಯಮ ಸಂಖ್ಯೆ 10)

**[12-6-2003 ರ ಭಾರತ ರಾಜಪತ್ರದ IX ನೇ ಭಾಗದ, 1 ನೇ ವಿಭಾಗದ, 25 ನೇ ಸಂಪುಟದ, 1 ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 50 ರಿಂದ 61 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ - I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ - II
### ಸಂಬಾರ ಪದಾರ್ಥಗಳ ಮಂಡಲಿ

3. ಮಂಡಲಿಯ ರಚನೆ ಮತ್ತು ನಿಗಮನ
4. ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು
5. ಸಲಹಾ ಸಮಿತಿಗಳು
6. ಮಂಡಲಿಗೆ ಏಲಕ್ಕಿ ಮಂಡಲಿಯ ಮತ್ತು ಸಂಬಾರ ಪದಾರ್ಥ ರಫ್ತು ಅಭಿವೃದ್ಧಿ ಪರಿಷತ್ತಿನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ
7. ಮಂಡಲಿಯ ಪ್ರಕಾರ್ಯಗಳು

### ಅಧ್ಯಾಯ - III
### ಏಲಕ್ಕಿ ತೋಟಗಳ ಒಡೆಯರ ನೋಂದಣಿ

8. ಏಲಕ್ಕಿ ತೋಟಗಳ ಒಡೆಯರ ನೋಂದಣಿ
9. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ
10. ನೋಂದಾಯಿತ ಒಡೆಯರು ನೀಡಬೇಕಾದ ವಿವರ ಪಟ್ಟಿಗಳು

### ಅಧ್ಯಾಯ - IV
### ಸಂಬಾರ ಪದಾರ್ಥಗಳ ರಫ್ತು ಪ್ರಮಾಣ ಪತ್ರ

11. ಯಾವನೇ ವ್ಯಕ್ತಿಯು ಪ್ರಮಾಣಪತ್ರವಿಲ್ಲದೆ ಸಂಬಾರ ಪದಾರ್ಥವನ್ನು ರಫ್ತು ಮಾಡತಕ್ಕುದಲ್ಲ
12. ಪ್ರಮಾಣಪತ್ರದ ನೀಡಿಕೆ

13. ಪ್ರಮಾಣಪತ್ರದ ರದ್ದಿಯಾತಿ, ನಿಲಂಬನ ಇತ್ಯಾದಿ
14. ಅಪೀಲು
15. ಪ್ರಮಾಣ ಪತ್ರವಿಲ್ಲದೆ ರಫ್ತಿಗೆ ಅನುಮತಿ ನೀಡುವ ಅಧಿಕಾರ

## ಅಧ್ಯಾಯ - V
## ಕೇಂದ್ರ ಸರ್ಕಾರದ ನಿಯಂತ್ರಣ

16. ಏಲಕ್ಕಿಯ ಬೆಲೆ ಮತ್ತು ವಿತರಣೆಯ ನಿಯಂತ್ರಣಾಧಿಕಾರ
17. ಏಲಕ್ಕಿಯ ಆಮದನ್ನು ನಿಷೇಧಿಸುವ ಅಥವಾ ನಿಯಂತ್ರಿಸುವ ಅಧಿಕಾರ
18. ನಿರ್ದೇಶನಗಳನ್ನು ಹೊರಡಿಸಲು ಕೇಂದ್ರ ಸರ್ಕಾರದ ಅಧಿಕಾರ
19. ಮಂಡಲಿಯನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ

## ಅಧ್ಯಾಯ - VI
## ಹಣಕಾಸು, ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ

20. ಕೇಂದ್ರ ಸರ್ಕಾರದ ಅನುದಾನಗಳು ಮತ್ತು ಸಾಲಗಳು
21. ಮಂಡಲಿಯ ನಿಧಿ
22. ಬಜೆಟ್
23. ವಾರ್ಷಿಕ ವರದಿ
24. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ
25. ವಾರ್ಷಿಕ ವರದಿಯನ್ನು ಮತ್ತು ಲೆಕ್ಕ ಪರಿಶೋಧಕರ ವರದಿಯನ್ನು ಸಂಸತ್ತಿನ ಮುಂದೆ ಇಡತಕ್ಕುದು

## ಅಧ್ಯಾಯ - VII
## ಸಂಕೀರ್ಣ

26. ಸುಳ್ಳು ವಿವರಣಪಟ್ಟಿ ತಯಾರಿಕೆಗೆ ದಂಡ
27. ಮಂಡಲಿಯ ಅಧಿಕಾರಿಯನ್ನು ಅಥವಾ ಸದಸ್ಯನನ್ನು ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಡ್ಡಿಪಡಿಸಿದರೆ ಮತ್ತು ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸಲು ತಪ್ಪಿದರೆ ದಂಡಗಳು
28. ಬೆಲೆ ನಿಯಂತ್ರಣ, ಮುಂತಾದುವಕ್ಕೆ ಸಂಬಂಧಿಸುವ ಆದೇಶದ ಉಲ್ಲಂಘನೆಗಾಗಿ ದಂಡ
29. 11ನೇ ಪ್ರಕರಣದ ಅಥವಾ 17ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶದ ಉಲ್ಲಂಘನೆಗಾಗಿ ದಂಡನೆಗಳು
30. ಇತರ ದಂಡಗಳು
31. ಕಂಪನಿಗಳಿಂದ ಅಪರಾಧಗಳು

32. 1962ರ ಅಧಿನಿಯಮ 52ರ ಉಪಬಂಧಗಳು ಸಂಬಾರ ಪದಾರ್ಥಗಳ ರಫ್ತಿಗೆ ಮತ್ತು ಏಲಕ್ಕಿಯ ಆಮದಿಗೆ ಅನ್ವಯವಾಗುವುದು
33. ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ
34. ಪ್ರತ್ಯಾಯೋಜನೆ
35. ಮಂಡಲಿಯ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಸರ್ಕಾರಿ ನೌಕರರಾಗಿರುವುದು
36. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
37. ಪ್ರವೇಶಾಧಿಕಾರ
38. ನಿಯಮ ರಚನಾಧಿಕಾರ
39. ವಿನಿಯಮನಗಳ ರಚನಾಧಿಕಾರ
40. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇರಿಸತಕ್ಕುದು
41. ತೊಂದರೆಗಳನ್ನು ನಿವಾರಿಸಲು ಅಧಿಕಾರ
42. ನಿರಸನ ಮತ್ತು ಉಳಿಸುವಿಕೆಗಳು

**ಅನುಸೂಚಿ**

# ಸಂಬಾರ ಪದಾರ್ಥಗಳ ಮಂಡಲಿ ಅಧಿನಿಯಮ, 1986

(1986ರ ಅಧಿನಿಯಮ ಸಂಖ್ಯೆ 10)

[ಮಾರ್ಚ್ 20, 1986]

ಸಂಬಾರ ಪದಾರ್ಥಗಳ ರಫ್ತು ಅಭಿವೃದ್ಧಿಗಾಗಿ ಮತ್ತು ಏಲಕ್ಕಿ ಬೇಸಾಯದ ನಿಯಂತ್ರಣ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳೂ ಸೇರಿದಂತೆ ಏಲಕ್ಕಿ ಉದ್ಯಮದ ನಿಯಂತ್ರಣಕ್ಕಾಗಿ ಮಂಡಲಿಯ ರಚನೆಗೆ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು :-

## ಅಧ್ಯಾಯ - I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಸಂಬಾರ ಪದಾರ್ಥಗಳ ಮಂಡಲಿ ಅಧಿನಿಯಮ, 1986 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ-

(ಎ) "ಮಂಡಲಿ" ಎಂದರೆ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಚಿಸಿದ ಸಂಬಾರ ಪದಾರ್ಥಗಳ ಮಂಡಲಿ;

(ಬಿ) "ಏಲಕ್ಕಿ" ಎಂದರೆ ಏಲಕ್ಕಿ ಗಿಡದ ಕಾಯಿ ಮತ್ತು ಹಸಿರು ಏಲಕ್ಕಿ, ಬಿಳುಚಿಸಿ ಮಾಡಿದ ಏಲಕ್ಕಿ, ಬಿಳುಚಿಸಬಹುದಾದ ಬಿಳಿಏಲಕ್ಕಿ, ಬಿಸಿಲಿನಲ್ಲಿ ಒಣಗಿಸಿದ ಏಲಕ್ಕಿ, ಏಲಕ್ಕಿ ಬೀಜಗಳು, ಪುಡಿ ಏಲಕ್ಕಿ ಮತ್ತು ಏಲಕ್ಕಿಯಿಂದ ತೆಗೆದ ಎಣ್ಣೆಯೂ ಒಳಗೊಳ್ಳುತ್ತದೆ ;

(ಸಿ) "ಏಲಕ್ಕಿ ಗಿಡ" ಎಂದರೆ ಇಲೆಟ್ಟೇರಿಯಾ ಕಾರ್ಡ್‌ಮೋಮಮ್ ಮ್ಯಾಟನ್, ಅಮ್ಮೊಮಮ್ ಸ್ಯುಬ್ಯುಲಟಮ್ ರಾಕ್ಸ್‌ಬ್ ಮತ್ತು ಮಂಡಲಿಯು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಕ್ಕಾಗಿ ಏಲಕ್ಕಿ ಗಿಡ ಎಂಬುದಾಗಿ ಘೋಷಿಸಬಹುದಾಗಿರುವ ಯಾವುದೇ ಇತರ ಗಿಡ ;

(ಡಿ) "ಪ್ರಮಾಣ ಪತ್ರ" ಎಂದರೆ 12ನೇ ಪ್ರಕರಣದ ಮೇರೆಗೆ ನೀಡಿದ ಒಂದು ಪ್ರಮಾಣ ಪತ್ರ ;

(ಇ) "ವ್ಯಾಪಾರಿ" ಎಂದರೆ ಸಂಬಾರ ಪದಾರ್ಥಗಳ ವ್ಯಾಪಾರಿ ;

(ಎಫ್) "ತೋಟ" ಎಂದರೆ ಏಲಕ್ಕಿ ಗಿಡಗಳನ್ನು ನೆಟ್ಟಿರುವ ಭೂಮಿಯನ್ನು ಒಳಗೊಂಡಿರುವ, ಏಕ ಘಟಕವಾಗಿ ನಿರ್ವಹಿಸಿದ ಪ್ರದೇಶ ;

(ಜಿ) "ರಫ್ತು" ಮತ್ತು "ಆಮದು" ಎಂದರೆ ಕ್ರಮವಾಗಿ ಭೂಮಾರ್ಗ, ಸಮುದ್ರ ಮಾರ್ಗ ಮತ್ತು ವಾಯು ಮಾರ್ಗವಾಗಿ ಭಾರತದ ಹೊರಗೆ ಕಳುಹಿಸುವುದು ಅಥವಾ ಭಾರತಕ್ಕೆ ತರಿಸಿಕೊಳ್ಳುವುದು ;

(ಹೆಚ್) "ತಯಾರಕ" ಎಂದರೆ ಸಂಬಾರ ಪದಾರ್ಥಗಳ ತಯಾರಕ ;

(ಐ) "ಸದಸ್ಯ" ಎಂದರೆ 3ನೇ ಪ್ರಕರಣದ (3) ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಿದ ಮಂಡಳಿಯ ಒಬ್ಬ ಸದಸ್ಯ ;

(ಜೆ) ಏಲಕ್ಕಿ ಗಿಡಗಳನ್ನು ನೆಟ್ಟಿರುವ ಯಾವುದೇ ಭೂಮಿಗೆ ಸಂಬಂಧಪಟ್ಟಂತೆ "ಒಡೆಯ" ಎಂಬುದರಲ್ಲಿ-

(i) ಒಡೆಯನ ಯಾವನೇ ಏಜೆಂಟನು; ಮತ್ತು

(ii) ಭೂಮಿಯ ವಾಸ್ತವಿಕ ಸ್ವಾಧೀನ ಹೊಂದಿರುವ ಅಡಮಾನದಾರನು, ಗೇಣಿದಾರನು ಅಥವಾ ಇತರ ವ್ಯಕ್ತಿಯು

-ಸೇರುತ್ತಾನೆ.

(ಕೆ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ;

(ಎಲ್) "ನೋಂದಾಯಿತ ತೋಟ" ಎಂದರೆ 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ತೋಟಕ್ಕೆ ಸಂಬಂಧಿಸಿದಂತೆ ಒಡೆಯನು ನೋಂದಾಯಿತನಾಗಿರುವನೋ ಆ ತೋಟ; ಮತ್ತು ಆ ಉಪಪ್ರಕರಣದ ಉಪಬಂಧಗಳ ಮೇರೆಗೆ ಯಾವ ತೋಟಕ್ಕೆ ಸಂಬಂಧಪಟ್ಟಂತೆ ಒಡೆಯನು ನೋಂದಾಯಿತನಾಗಬೇಕಾಗಿದೆಯೋ ಆ ಯಾವುದೇ ತೋಟ ;

(ಎಂ) "ನೋಂದಾಯಿತ ಒಡೆಯ" ಎಂದರೆ 8ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನೋಂದಾಯಿತವಾಗಿರುವ ಅಥವಾ ನೋಂದಾಯಿಸಿರುವ ನೋಂದಾಯಿತ ತೋಟದ ಅಥವಾ ನೋಂದಾಯಿಸಬೇಕಾಗಿರುವ ತೋಟದ ಒಡೆಯ ; ಮತ್ತು

(ಎನ್) "ಸಂಬಾರ ಪದಾರ್ಥಗಳು" ಎಂದರೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಂಬಾರ ಪದಾರ್ಥಗಳು :

ಪರಂತು, ಕೇಂದ್ರ ಸರ್ಕಾರಕ್ಕೆ, ಸಾರ್ವಜನಿಕ ಹಿತದೃಷ್ಟಿಯಿಂದ, ಯಾವುದೇ ಇತರ ಸಂಬಾರ ಪದಾರ್ಥಗಳನ್ನು ಅನುಸೂಚಿಗೆ ಸೇರಿಸುವುದು ಅಥವಾ ಯಾವುದೇ ಸಂಬಾರ ಪದಾರ್ಥವನ್ನು ಅನುಸೂಚಿಯಿಂದ ಬಿಟ್ಟುಬಿಡುವುದು ಅವಶ್ಯವೆಂದು ಅಥವಾ ಯುಕ್ತವೆಂದು ಮನದಟ್ಟಾದರೆ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಅದು ಹಾಗೆ ಮಾಡಬಹುದು.

## ಅಧ್ಯಾಯ - II

## ಸಂಬಾರ ಪದಾರ್ಥಗಳ ಮಂಡಲಿ

**3. ಮಂಡಲಿಯ ರಚನೆ ಮತ್ತು ನಿಗಮನ.-** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ನೀಡುವ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಸಂಬಾರ ಪದಾರ್ಥಗಳ ಮಂಡಲಿ ಎಂದು ಕರೆಯಲಾಗುವ ಒಂದು ಮಂಡಲಿಯನ್ನು ರಚಿಸತಕ್ಕುದು.

(2) ಮಂಡಲಿಯು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮೇಲೆ ಹೇಳಿದ ಹೆಸರಿನ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಕರಾರು ಮಾಡಿಕೊಳ್ಳುವ ಅಧಿಕಾರವಿರುವ ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕುದು ಮತ್ತು ದಾವೆಗೆ ಗುರಿಯಾಗತಕ್ಕುದು.

(3) ಮಂಡಲಿಯು, ನಿಯಮಿಸಬಹುದಾದಂತೆ ಮೂವತ್ತೆರಡಕ್ಕೆ ಮೀರದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕುದು, ಮತ್ತು ಈ ಬಗ್ಗೆ ಮಾಡಲಾದ ನಿಯಮಗಳು ಅನ್ಯಥಾ

ಉಪಬಂಧಿಸಿದ ಹೊರತು ಮಂಡಲಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ:–

(ಎ) ಒಬ್ಬ ಅಧ್ಯಕ್ಷ ;

(ಬಿ) ಮೂವರು ಸಂಸತ್ ಸದಸ್ಯರು, ಇವರಲ್ಲಿ ಇಬ್ಬರು ಲೋಕಸಭೆಯಿಂದ ಮತ್ತು ಒಬ್ಬ ರಾಜ್ಯಸಭೆಯಿಂದ ಚುನಾಯಿತರಾಗತಕ್ಕುದು;

(ಸಿ) ಕೇಂದ್ರ ಸರ್ಕಾರದಲ್ಲಿ ಅನುಕ್ರಮವಾಗಿ –

(i) ವಾಣಿಜ್ಯ;

(ii) ಕೃಷಿ ; ಮತ್ತು

(iii) ಹಣಕಾಸು

– ಇವುಗಳ ಬಗ್ಗೆ ವ್ಯವಹರಿಸುವ ಮಂತ್ರಾಲಯಗಳನ್ನು ಪ್ರತಿನಿಧಿಸುವ ಮೂವರು ಸದಸ್ಯರು ;

(ಡಿ) ಸಂಬಾರ ಪದಾರ್ಥಗಳ ಬೆಳೆಗಾರರನ್ನು ಪ್ರತಿನಿಧಿಸುವ ಆರು ಸದಸ್ಯರು ;

(ಇ) ಸಂಬಾರ ಪದಾರ್ಥಗಳ ರಫ್ತುಗಾರರನ್ನು ಪ್ರತಿನಿಧಿಸುವ ಹನ್ನೊಂದು ಸದಸ್ಯರು ;

(ಎಫ್) ಪ್ರಮುಖ ಸಂಬಾರ ಪದಾರ್ಥಗಳ ಉತ್ಪಾದಕ ರಾಜ್ಯಗಳನ್ನು ಪ್ರತಿನಿಧಿಸುವ ಮೂವರು ಸದಸ್ಯರು ;

(ಜಿ) ಈ ಮುಂದಿನ ಪ್ರತಿಯೊಂದನ್ನು ಎಂದರೆ–

(i) ಕೋಕೋ, ಅಡಿಕೆ ಮತ್ತು ಸಂಬಾರ ಪದಾರ್ಥಗಳ ಅಭಿವೃದ್ಧಿ ನಿರ್ದೇಶನಾಲಯ, ಕಲ್ಲಿಕೋಟೆ ;

(ii) ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಯಾಕೇಜಿಂಗ್, ಮುಂಬಯಿ ;

(iii) ಕೇಂದ್ರ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ;

(iv) ಪ್ರಾದೇಶಿಕ ಸಂಶೋಧನಾ ಪ್ರಯೋಗಾಲಯ, ತಿರುವನಂತಪುರ ;

(v) ಕೇಂದ್ರ ನೆಡುತೋಪು ಬೆಳೆಗಳ ಸಂಶೋಧನಾ ಸಂಸ್ಥೆ, ಕಾಸರಗೋಡು

– ಇವುಗಳನ್ನು ಪ್ರತಿನಿಧಿಸುವ ಐವರು ಸದಸ್ಯರು.

(4) ಮಂಡಲಿಯ ಸದಸ್ಯನ ಪದವು, ಆ ಪದದ ಧಾರಕನನ್ನು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಸದಸ್ಯನಾಗಿರಲು ಅನರ್ಹಗೊಳಿಸತಕ್ಕುದಲ್ಲ.

(5) ಸದಸ್ಯರ ಪದಾವಧಿಯು ಮತ್ತು ಸದಸ್ಯರ ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕುದು.

(6) ಅಧ್ಯಕ್ಷನು, ಮಂಡಲಿಯ ಸಭೆಗಳ ಅಧ್ಯಕ್ಷತೆಯನ್ನು ವಹಿಸುವುದರ ಜೊತೆಗೆ, ಮಂಡಲಿಯು ಅವನಿಗೆ ವಹಿಸಿಕೊಡಬಹುದಾದಂಥ ಮಂಡಲಿಯ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕುದು ಮತ್ತು ನಿರ್ವಹಿಸತಕ್ಕುದು.

(7) ಮಂಡಲಿಯು ತನ್ನ ಸದಸ್ಯರ ಪೈಕಿ ಒಬ್ಬ ಉಪಾಧ್ಯಕ್ಷನನ್ನು ಚುನಾಯಿಸತಕ್ಕುದು, ಅಧ್ಯಕ್ಷನು ಅವನಿಗೆ ನಿಯಮಿಸಬಹುದಾದಂಥ ಅಥವಾ ವಹಿಸಿಕೊಡಬಹುದಾದಂಥ ಅಧ್ಯಕ್ಷನ ಅಧಿಕಾರಗಳನ್ನು ಅವನು ಚಲಾಯಿಸತಕ್ಕುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(8) ಮಂಡಲಿಯ ಯಾವುದೇ ಕ್ರಮವು ಅಥವಾ ವ್ಯವಹರಣೆಯು–

(ಎ) ಮಂಡಲಿಯಲ್ಲಿ ಯಾವುದೇ ಖಾಲಿ ಸ್ಥಾನದ ಅಥವಾ ಅದರ ರಚನೆಯಲ್ಲಿನ ಯಾವುದೇ ದೋಷದ ;

(ಬಿ) ಮಂಡಲಿಯ ಸದಸ್ಯನಾಗಿ ಕಾರ್ಯ ಮಾಡುತ್ತಿರುವ ಒಬ್ಬ ವ್ಯಕ್ತಿಯ ನೇಮಕದಲ್ಲಿನ ಯಾವುದೇ ದೋಷದ ;

(ಸಿ) ವಿಷಯದ ಗುಣಗಳಿಗೆ ಬಾಧಕವಾಗದಂಥ, ಮಂಡಲಿಯ ಕಾರ್ಯವಿಧಾನದಲ್ಲಾದ ಯಾವುದೇ ಅಕ್ರಮತೆಯ

– ಕಾರಣ ಮಾತ್ರದಿಂದ ಅಸಿಂಧುವಾಗತಕ್ಕುದಲ್ಲ.

**4. ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು.**– (1) ಮಂಡಲಿಯು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ತಾನು ಅವಶ್ಯವೆಂದು ಪರಿಗಣಿಸಬಹುದಾದಂತೆ ಕಾರ್ಯದರ್ಶಿಯನ್ನು ಮತ್ತು ಅಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಬಹುದು.

(2) ಮಂಡಲಿಯ ಕಾರ್ಯದರ್ಶಿಯ ಮತ್ತು ಇತರ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕುದು.

**5. ಸಲಹಾ ಸಮಿತಿಗಳು.**– (1) ಈ ಬಗ್ಗೆ ಮಾಡಿದ ಯಾವುವೇ ನಿಯಮಗಳಿಗೊಳಪಟ್ಟು, ಮಂಡಲಿಯು ಕಾಲಕಾಲಕ್ಕೆ, ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅವಶ್ಯವಿರುವಂಥ ಸಮಿತಿಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಪ್ರತಿಯೊಂದು ಸಮಿತಿಯು, ಮಂಡಲಿಯು ಯೋಗ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡಿರತಕ್ಕುದು.

**6. ಮಂಡಲಿಗೆ, ಏಲಕ್ಕಿ ಮಂಡಲಿಯ ಮತ್ತು ಸಂಬಾರ ಪದಾರ್ಥ ರಫ್ತು ಅಭಿವೃದ್ಧಿ ಪರಿಷತ್ತಿನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.**– (1) ಈ ಅಧಿನಿಯಮದ ಪ್ರಾರಂಭದಂದು ಮತ್ತು ಅಂದಿನಿಂದ,–

(ಎ) ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ ಏಲಕ್ಕಿ ಮಂಡಲಿಯಲ್ಲಿ ಮತ್ತು ಸಂಬಾರ ಪದಾರ್ಥಗಳ ರಫ್ತು ಅಭಿವೃದ್ಧಿ ಪರಿಷತ್ತಿನಲ್ಲಿ ನಿಹಿತವಾಗಿದ್ದ ಎಲ್ಲ ಸ್ವತ್ತುಗಳು ಮತ್ತು ಇತರ ಆಸ್ತಿಗಳು ಮಂಡಲಿಯಲ್ಲಿ ನಿಹಿತವಾಗತಕ್ಕುದು ;

(ಬಿ) ಏಲಕ್ಕಿ ಮಂಡಲಿಯ ಅಥವಾ ಸಂಬಾರ ಪದಾರ್ಥ ರಫ್ತು ಅಭಿವೃದ್ಧಿ ಪರಿಷತ್ತಿನ ಉದ್ದೇಶಕ್ಕಾಗಿ ಅಥವಾ ಉದ್ದೇಶಕ್ಕೆ ಸಂಬಂಧಪಟ್ಟಂತೆ, ಅಂಥ ಪ್ರಾರಂಭದ ನಿಕಟ ಪೂರ್ವದಲ್ಲಿ, ಏಲಕ್ಕಿ ಮಂಡಲಿಯು ಅಥವಾ ಸಂಬಾರ ರಫ್ತು ಅಭಿವೃದ್ಧಿ ಪರಿಷತ್ತು, ಅಥವಾ ಮಂಡಲಿಯೊಂದಿಗೆ, ಪರಿಷತ್ತಿನೊಂದಿಗೆ ಅಥವಾ ಮಂಡಲಿಗಾಗಿ, ಪರಿಷತ್ತಿಗಾಗಿ, ವಹಿಸಿದ ಎಲ್ಲ ಋಣಗಳನ್ನು, ಬಾಧ್ಯತೆಗಳನ್ನು ಮತ್ತು ಹೊಣೆಗಳನ್ನು, ಮಾಡಿಕೊಂಡ ಎಲ್ಲ ಕರಾರುಗಳನ್ನು, ಮಾಡಬೇಕಾದ, ಮಾಡಲು ತೊಡಗಬೇಕಾದ, ಎಲ್ಲ ವಿಷಯಗಳನ್ನು ಮತ್ತು ಕಾರ್ಯಗಳನ್ನು ಮಂಡಲಿಯು, ಮಂಡಲಿಯೊಂದಿಗೆ, ಮಂಡಲಿಗಾಗಿ ವಹಿಸಿದೆ, ಮಾಡಿಕೊಳ್ಳಲಾಗಿದೆ ಅಥವಾ ಮಾಡಬೇಕಾಗಿದೆ, ಮಾಡಲು ತೊಡಗಬೇಕಾಗಿದೆ ಎಂದು ಭಾವಿಸತಕ್ಕದ್ದು;

(ಸಿ) ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ ಏಲಕ್ಕಿ ಮಂಡಲಿಗೆ ಅಥವಾ ಸಂಬಾರ ಪದಾರ್ಥ ರಫ್ತು ಅಭಿವೃದ್ಧಿ ಪರಿಷತ್ತಿಗೆ ಬರಬೇಕಾದ ಎಲ್ಲ ಹಣದ ಮೊತ್ತಗಳನ್ನು ಮಂಡಲಿಗೆ ಬರಬೇಕಾದ ಹಣದ ಮೊತ್ತಗಳು ಎಂದು ಭಾವಿಸತಕ್ಕುದು ;

(ಡಿ) ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ ಏಲಕ್ಕಿ ಮಂಡಲಿಯು ಅಥವಾ ಸಂಬಾರ ಪದಾರ್ಥ ರಫ್ತು ಅಭಿವೃದ್ಧಿ ಪರಿಷತ್ತು ಹೂಡಿದ್ದ ಅಥವಾ ಅವುಗಳ ವಿರುದ್ಧ ಹೂಡಲಾಗಿದ್ದ ಎಲ್ಲ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಮಂಡಲಿಯು ಅಥವಾ ಅದರ ವಿರುದ್ಧ ಮುಂದುವರೆಸಬಹುದು ಅಥವಾ ಹೂಡಬಹುದು ; ಮತ್ತು

(ಇ) ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ ಏಲಕ್ಕಿ ಮಂಡಲಿಯಲ್ಲಿ ಅಥವಾ ಸಂಬಾರ ಪದಾರ್ಥ ರಫ್ತು ಅಭಿವೃದ್ಧಿ ಪರಿಷತ್ತಿನಲ್ಲಿ ಯಾವುದೇ ಪದವನ್ನು ಹೊಂದಿರುವ ಪ್ರತಿಯೊಬ್ಬ ನೌಕರನು, ಹಾಗೆ ನಿಹಿತವಾಗಿರದಿದ್ದರೆ ಅವನಿಗೆ ದೊರೆಯಬಹುದಾಗಿದ್ದ ನಿವೃತ್ತಿವೇತನದ, ಉಪದಾನದ ಮತ್ತು ಇತರ ವಿಷಯಗಳ ಬಗ್ಗೆ, ಅವೇ ಹಕ್ಕುಗಳೊಂದಿಗೆ ಮತ್ತು ವಿಶೇಷಾಧಿಕಾರಗಳೊಂದಿಗೆ ಮಂಡಲಿಯಲ್ಲಿ ಅಂಥ ಪ್ರಾರಂಭದಂದು ತನ್ನ ಪದವನ್ನು ಅಥವಾ ಸೇವೆಯನ್ನು ಧಾರಣ ಮಾಡತಕ್ಕುದು ಮತ್ತು ಅವನ ನಿಯೋಜನೆಯನ್ನು ಮಂಡಲಿಯು ಯುಕ್ತವಾಗಿ ಮುಕ್ತಾಯಗೊಳಿಸಿದ ಹೊರತು ಅಥವಾ ಮುಕ್ತಾಯಗೊಳಿಸುವವರೆಗೆ ಅಥವಾ ಅವನ ಪರಿಶ್ರಮಧನವನ್ನು ಮತ್ತು ಇತರ ಸೇವಾ ಷರತ್ತುಗಳನ್ನು ಮಂಡಲಿಯು ಯಥಾಕ್ರಮವಾಗಿ ಮಾರ್ಪಾಟು ಮಾಡುವವರೆಗೆ ಪದದಲ್ಲಿ ಮುಂದುವರೆಯತಕ್ಕುದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗೆ ಮಂಡಲಿಯು ತನ್ನ ನಿಯತ ಸೇವೆಯಲ್ಲಿ ತಾನು ಮಾಡಿಕೊಳ್ಳುವ ಯಾವನೇ ನೌಕರನ ವಿಲೀನವು, ಆ ಅಧಿನಿಯಮದ ಅಥವಾ ಇತರ ಕಾನೂನಿನ ಮೇರೆಗಿನ ಯಾವುದೇ ಪರಿಹಾರಕ್ಕೆ ಅಂಥ ನೌಕರನಿಗೆ ಹಕ್ಕು ನೀಡತಕ್ಕುದಲ್ಲ ಮತ್ತು ಅಂಥ ಕ್ಲೇಮನ್ನು ಯಾವುದೇ ನ್ಯಾಯಾಲಯವು, ನ್ಯಾಯಮಂಡಲಿಯು ಅಥವಾ ಇತರ ಪ್ರಾಧಿಕಾರವು ಅಂಗೀಕರಿಸತಕ್ಕುದಲ್ಲ.

**7. ಮಂಡಲಿಯ ಪ್ರಕಾರ್ಯಗಳು.–** (1) ಮಂಡಲಿಯು –

(i) ಸಂಬಾರ ಪದಾರ್ಥಗಳ ರಫ್ತನ್ನು ಅಭಿವೃದ್ಧಿಪಡಿಸಬಹುದು, ಪ್ರೋತ್ಸಾಹಿಸಬಹುದು ಮತ್ತು ಕ್ರಮಬದ್ಧಗೊಳಿಸಬಹುದು ;

(ii) ಸಂಬಾರ ಪದಾರ್ಥಗಳ ರಫ್ತಿಗಾಗಿ ಪ್ರಮಾಣ ಪತ್ರವನ್ನು ನೀಡಬಹುದು ಮತ್ತು ಅದಕ್ಕಾಗಿ ದಳ್ಳಾಳಿಗಳನ್ನು ನೋಂದಾಯಿಸಿಕೊಳ್ಳಬಹುದು ;

(iii) ಸಂಬಾರ ಪದಾರ್ಥಗಳ ರಫ್ತಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಕೈಗೊಳ್ಳಬಹುದು ;

(iv) ಸಂಬಾರ ಪದಾರ್ಥಗಳ ಸಂಸ್ಕರಣೆ, ಗುಣಮಟ್ಟ, ಶ್ರೇಣೀಕರಣ ತಂತ್ರ ಮತ್ತು ಪ್ಯಾಕೇಜಿಂಗ್ ಇವುಗಳ ಸುಧಾರಣೆಗಾಗಿ ಅಧ್ಯಯನಗಳಿಗೆ ಮತ್ತು ಸಂಶೋಧನೆಗೆ ನೆರವು ಮತ್ತು ಉತ್ತೇಜನ ನೀಡಬಹುದು ;

(v) ರಫ್ತು ಮಾಡುವುದಕ್ಕಾಗಿ ಸಂಬಾರ ಪದಾರ್ಥಗಳ ದರಗಳ ಸ್ಥಿರೀಕರಣಕ್ಕೆ ಪ್ರಯತ್ನಿಸಬಹುದು ;

(vi) ರಫ್ತು ಮಾಡುವುದಕ್ಕಾಗಿ ಸಂಬಾರ ಪದಾರ್ಥಗಳಿಗೆ "ಗುಣಮಟ್ಟ ಗುರುತು" ಹಾಕುವ ಮುಖಾಂತರ ಸೂಕ್ತ ಗುಣಮಟ್ಟ ಮಾನಕಗಳನ್ನು ರೂಪಿಸಬಹುದು ಮತ್ತು ಗುಣಮಟ್ಟ ಪ್ರಮಾಣೀಕರಣವನ್ನು ಜಾರಿಗೆ ತರಬಹುದು ;

(vii) ರಫ್ತು ಮಾಡುವುದಕ್ಕಾಗಿ ಸಂಬಾರ ಪದಾರ್ಥಗಳ ಗುಣಮಟ್ಟವನ್ನು ನಿಯಂತ್ರಿಸಬಹುದು ;

(viii) ನಿಯಮಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ರಫ್ತು ಮಾಡುವುದಕ್ಕಾಗಿ ಸಂಬಾರ ಪದಾರ್ಥಗಳ ತಯಾರಕರಿಗೆ ಲೈಸೆನ್ಸುಗಳನ್ನು ನೀಡಬಹುದು ;

(ix) ರಫ್ತಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ, ಅವಶ್ಯವೆಂದು ಪರಿಗಣಿಸಿದರೆ, ಯಾವುದೇ ಸಂಬಾರ ಪದಾರ್ಥವನ್ನು ಮಾರಾಟ ಮಾಡಬಹುದು ;

(x) ಸಂಬಾರ ಪದಾರ್ಥಗಳಿಗಾಗಿ ವಿದೇಶದಲ್ಲಿ ಉಗ್ರಾಣ ಸೌಲಭ್ಯಗಳನ್ನು ಒದಗಿಸಬಹುದು ;

(xi) ಸಂಕಲನ ಮತ್ತು ಪ್ರಕಟಣೆಗಾಗಿ ಸಂಬಾರ ಪದಾರ್ಥಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸಬಹುದು ;

(xii) ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮಾರಾಟಕ್ಕಾಗಿ ಯಾವುದೇ ಸಂಬಾರ ಪದಾರ್ಥವನ್ನು ಆಮದು ಮಾಡಿಕೊಳ್ಳಬಹುದು ; ಮತ್ತು

(xiii) ಸಂಬಾರ ಪದಾರ್ಥಗಳ ಆಮದಿಗೆ ಮತ್ತು ರಫ್ತಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಬಹುದು;

(2) ಅಲ್ಲದೆ, ಮಂಡಲಿಯು –

(i) ಏಲಕ್ಕಿ ಬೆಳೆಗಾರರಲ್ಲಿ ಸಹಕಾರಿ ಪ್ರವೃತ್ತಿಯನ್ನು ಪ್ರೋತ್ಸಾಹಿಸಬಹುದು ;

(ii) ಏಲಕ್ಕಿ ಬೆಳೆಗಾರರಿಗೆ ಲಾಭದಾಯಕ ಪ್ರತಿಫಲ ದೊರೆಯುವುದನ್ನು ಸುನಿಶ್ಚಿತಗೊಳಿಸಬಹುದು ;

(iii) ಏಲಕ್ಕಿಯ ಬೇಸಾಯದಲ್ಲಿ ಸುಧಾರಿತ ವಿಧಾನಗಳಿಗಾಗಿ ಮತ್ತು ಏಲಕ್ಕಿ ಸಂಸ್ಕರಣೆಗಾಗಿ, ಏಲಕ್ಕಿ ಬೆಳೆಯನ್ನು ನಾಟಿ ಹಾಕಲು ಮತ್ತು ಏಲಕ್ಕಿ ಬೆಳೆಯುವ ಪ್ರದೇಶಗಳ ವಿಸ್ತರಣೆಗಾಗಿ ಹಣಕಾಸು ಅಥವಾ ಇತರ ನೆರವನ್ನು ನೀಡಬಹುದು ;

(iv) ಏಲಕ್ಕಿಯ ಮಾರಾಟವನ್ನು ಕ್ರಮಬದ್ಧಪಡಿಸಬಹುದು ಮತ್ತು ಏಲಕ್ಕಿಯ ದರಗಳನ್ನು ಸ್ಥಿರೀಕರಣಗೊಳಿಸಬಹುದು ;

(v) ಏಲಕ್ಕಿಯನ್ನು ಪರೀಕ್ಷಿಸುವುದರಲ್ಲಿ ತರಬೇತಿ ನೀಡಬಹುದು ಮತ್ತು ಏಲಕ್ಕಿ ಪ್ರಮಾಣ ಮಾನಕಗಳನ್ನು ನಿಗದಿಪಡಿಸಬಹುದು;

(vi) ಏಲಕ್ಕಿಯ ಬಳಕೆಯನ್ನು ಹೆಚ್ಚಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಪ್ರಚಾರ ಕಾರ್ಯವನ್ನು ಕೈಗೊಳ್ಳಬಹುದು ;

(vii) ಏಲಕ್ಕಿಯ ಲೈಸೆನ್ಸ್ ದಳ್ಳಾಳಿಗಳನ್ನು (ಹರಾಜುಗಾರರು ಸೇರಿದಂತೆ) ಮತ್ತು ಏಲಕ್ಕಿಯ ವ್ಯಾಪಾರದಲ್ಲಿ ತೊಡಗಿರುವ ವ್ಯಕ್ತಿಗಳ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು ;

(viii) ಏಲಕ್ಕಿಯ ಮಾರಾಟವನ್ನು ಸುಧಾರಿಸಬಹುದು ;

(ix) ಏಲಕ್ಕಿ ಉದ್ಯಮಕ್ಕೆ ಸಂಬಂಧಪಡುವ ಯಾವುದೇ ವಿಷಯದ ಬಗ್ಗೆ ಬೆಳೆಗಾರರಿಂದ, ವ್ಯಾಪಾರಿಗಳಿಂದ ಮತ್ತು ನಿಯಮಿಸಬಹುದಾದಂಥ ಇತರ ವ್ಯಕ್ತಿಗಳಿಂದ ಅಂಕಿ ಅಂಶಗಳನ್ನು ಸಂಗ್ರಹಿಸಬಹುದು, ಸಂಗ್ರಹಿಸಿದ ಅಂಕಿ ಅಂಶಗಳನ್ನು ಅಥವಾ ಅದರ ಭಾಗಗಳನ್ನು ಅಥವಾ ಅದರ ಉದ್ಧೃತ ಭಾಗಗಳನ್ನು ಪ್ರಕಟಿಸಬಹುದು ;

(x) ಕೆಲಸಗಾರರಿಗೆ ಕಾರ್ಯನಿರ್ವಹಣೆಗಾಗಿ ಉತ್ತಮ ಸ್ಥಿತಿಗತಿಗಳನ್ನು ಒದಗಿಸಬಹುದು, ಹಾಗೂ ಅವರಿಗೆ ಸೌಕರ್ಯಗಳನ್ನು ಮತ್ತು ಪ್ರೋತ್ಸಾಹಗಳನ್ನು ಕಲ್ಪಿಸಬಹುದು ಮತ್ತು ಅವುಗಳನ್ನು ಸುಧಾರಿಸಬಹುದು ; ಮತ್ತು

(xi) ವೈಜ್ಞಾನಿಕ, ತಾಂತ್ರಿಕ ಮತ್ತು ಆರ್ಥಿಕ ಸಂಶೋಧನೆಯನ್ನು ಕೈಗೊಳ್ಳಬಹುದು, ಅದಕ್ಕೆ ನೆರವು ನೀಡಬಹುದು ಅಥವಾ ಪ್ರೋತ್ಸಾಹ ನೀಡಬಹುದು ;

## ಅಧ್ಯಾಯ – III

## ಏಲಕ್ಕಿ ತೋಟಗಳ ಒಡೆಯರ ನೋಂದಣಿ

**8. ಏಲಕ್ಕಿ ತೋಟಗಳ ಒಡೆಯರ ನೋಂದಣಿ.–** (1) ಏಲಕ್ಕಿ ಸಸ್ಯಗಳನ್ನು ನೆಟ್ಟಿರುವ ಜಮೀನಿನ ಪ್ರತಿಯೊಬ್ಬ ಒಡೆಯನು, ಅಂಥ ಜಮೀನು, ಒಂದು ತೋಟವನ್ನಾಗಲಿ ಅಥವಾ ಒಂದಕ್ಕಿಂತ ಹೆಚ್ಚು ತೋಟಗಳನ್ನಾಗಲಿ ಒಳಗೊಂಡಿರಲಿ, ಅವನು ಯಾವ ದಿನಾಂಕದಂದು ಮೊದಲ ಅಂಥ ತೋಟದ ಅಥವಾ ತೋಟಗಳ ಒಡೆಯನಾದನೋ ಆ ದಿನಾಂಕದಿಂದ ಒಂದು ತಿಂಗಳ ಮುಕ್ತಾಯಕ್ಕೆ ಮುಂಚೆ, ತಾನು ಒಡೆಯನಾಗಿರುವ ಪ್ರತಿಯೊಂದು ತೋಟಕ್ಕೆ ಸಂಬಂಧಪಟ್ಟಂತೆ ಒಡೆಯನಾಗಿ ನೋಂದಾಯಿಸಿಕೊಳ್ಳಲು ಈ ಬಗ್ಗೆ ರಾಜ್ಯ ಸರ್ಕಾರದಿಂದ ನೇಮಕಗೊಂಡ ನೋಂದಣಿ ಅಧಿಕಾರಿಗೆ ಅರ್ಜಿ ಸಲ್ಲಿಸತಕ್ಕದು :

ಪರಂತು, ರಾಜ್ಯ ಸರ್ಕಾರವು, ಸಾಕಷ್ಟು ಕಾರಣಗಳಿಗಾಗಿ, ತಾನು ಯೋಗ್ಯವೆಂದು ಭಾವಿಸಬಹುದಾದಂಥ ಅವಧಿಯವರೆಗೆ ನೋಂದಣಿ ಕಾಲಮಿತಿಯನ್ನು ವಿಸ್ತರಿಸಬಹುದು.

(2) ಒಮ್ಮೆ ಮಾಡಿದ ನೋಂದಣಿಯು, ನೋಂದಣಿ ಅಧಿಕಾರಿಯು ಅದನ್ನು ರದ್ದುಪಡಿಸುವವರೆಗೂ ಜಾರಿಯಲ್ಲಿರುವುದು ಮುಂದುವರೆಯತಕ್ಕದು.

**9. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, 8ನೇ ಪ್ರಕರಣದ ಉಪಬಂಧಗಳನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ಮೇಲೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು, ನೋಂದಣಿಗಾಗಿ ಮತ್ತು ನೋಂದಣಿಯ ರದ್ದಿಯಾತಿಗಾಗಿ ಅರ್ಜಿಯ ನಮೂನೆ, ಅಂಥ ಅರ್ಜಿಗಳ ಸಂಬಂಧ ಸಂದಾಯ ಮಾಡಬೇಕಾದ ಫೀಜು, ಅಂಥ ಅರ್ಜಿಯಲ್ಲಿ ಸೇರಿಸಬೇಕಾದ ವಿವರಗಳು, ನೋಂದಣಿಯನ್ನು ನೀಡುವಲ್ಲಿ ಮತ್ತು ರದ್ದುಪಡಿಸುವಲ್ಲಿ ಪಾಲಿಸಬೇಕಾದ ವಿಧಾನ,

ನೋಂದಣಿ ಅಧಿಕಾರಿಗಳು ಇಡಬೇಕಾದ ರಿಜಿಸ್ಟರುಗಳು ಮತ್ತು ನೋಂದಣಿ ಅಧಿಕಾರಿಗಳು ಮಂಡಲಿಗೆ ಒದಗಿಸಬೇಕಾದ ಮಾಹಿತಿ ಇವುಗಳನ್ನು ನಿಯಮಿಸಬಹುದು.

**10. ನೋಂದಾಯಿತ ಒಡೆಯರು ನೀಡಬೇಕಾದ ವಿವರ ಪಟ್ಟಿಗಳು.**-(1)ನೋಂದಾಯಿತ ಒಡೆಯನು ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಕಾಲಗಳಲ್ಲಿ ಮತ್ತು ವಿಧಾನದಲ್ಲಿ ವಿವರಪಟ್ಟಿಗಳನ್ನು ಮಂಡಲಿಗೆ ಒಪ್ಪಿಸತಕ್ಕದು.

(2) ಮಂಡಲಿಯು, ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ವಿವರಣ ಪಟ್ಟಿಯು ಕರಾರುವಾಕ್ಕಾಗಿದೆಯೇ ಎಂಬುದನ್ನು ಸತ್ಯಾಪನೆಮಾಡಲು ಅಥವಾ ತೋಟದ ಉತ್ಪಾದನಾ ಸಾಮರ್ಥ್ಯವನ್ನು ಖಚಿತ ಪಡಿಸಿಕೊಳ್ಳಲು ಯಾವುದೇ ತೋಟಕ್ಕೆ ಯಾವುದೇ ಕಾಲದಲ್ಲಿ ಭೇಟಿ ನೀಡಲು ಒಬ್ಬ ಅಧಿಕಾರಿಗೆ ಅಧಿಕಾರ ನೀಡಬಹುದು.

## ಅಧ್ಯಾಯ - IV

## ಸಂಬಾರ ಪದಾರ್ಥಗಳ ರಫ್ತು ಪ್ರಮಾಣಪತ್ರ

**11. ಯಾವನೇ ವ್ಯಕ್ತಿಯು ಪ್ರಮಾಣ ಪತ್ರವಿಲ್ಲದೆ ಸಂಬಾರ ಪದಾರ್ಥವನ್ನು ರಫ್ತು ಮಾಡತಕ್ಕದಲ್ಲ.**- ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಯಾವನೇ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭದ ತರುವಾಯ, ಪ್ರಮಾಣ ಪತ್ರದ ಮೇರೆಗೆ ಮತ್ತು ಅದರ ಅನುಸಾರವಾಗಲ್ಲದೆ ಯಾವುದೇ ಸಂಬಾರ ಪದಾರ್ಥದ ರಫ್ತು ವ್ಯಾಪಾರವನ್ನು ಪ್ರಾರಂಭಿಸತಕ್ಕದಲ್ಲ ಅಥವಾ ನಡೆಸತಕ್ಕದಲ್ಲ:

ಪರಂತು, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಸಂಬಾರ ಪದಾರ್ಥಗಳ ರಫ್ತು ವ್ಯಾಪಾರವನ್ನು ನಡೆಸುವ ವ್ಯಕ್ತಿಯು, ಅಂಥ ಪ್ರಾರಂಭದಿಂದ ಮೂರು ತಿಂಗಳುಗಳ ಅವಧಿಯವರೆಗೆ, ಮತ್ತು ಅವನು ಮೂರು ತಿಂಗಳುಗಳ ಸದರಿ ಅವಧಿಯೊಳಗೆ ಅಂಥ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರೆ, ಅಂಥ ಅರ್ಜಿಯು ಇತ್ಯರ್ಥವಾಗುವವರೆಗೆ ಹಾಗೆ ಮಾಡುವುದನ್ನು ಮುಂದುವರೆಸಬಹುದು.

**ವಿವರಣೆ:**-ಈ ಅಧಿನಿಯಮದ ಪ್ರಾರಂಭದ ಬಗ್ಗೆ ಈ ಪ್ರಕರಣದಲ್ಲಿ ಮಾಡಿರುವ ಉಲ್ಲೇಖವನ್ನು, 2ನೇ ಪ್ರಕರಣದ (ಆರ್) ಖಂಡದ ಪರಂತುಕದ ಮೇರೆಗೆ ಅಧಿಸೂಚನೆಯ ಮೂಲಕ ಅನುಸೂಚಿಗೆ ಸೇರಿದ ಯಾವುದೇ ಸಂಬಾರ ಪದಾರ್ಥಕ್ಕೆ ಸಂಬಂಧಪಟ್ಟಂತೆ, ಯಾವ ದಿನಾಂಕದಿಂದ ಜಾರಿಗೆ ಬರುವಂತೆ ಅಂಥ ಸಂಬಾರ ಪದಾರ್ಥವನ್ನು ಅನುಸೂಚಿಗೆ ಸೇರಿಸಲಾಯಿತೋ ಆ ದಿನಾಂಕಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

**12. ಪ್ರಮಾಣಪತ್ರದ ನೀಡಿಕೆ.**- (1) ಪ್ರಮಾಣ ಪತ್ರ ನೀಡಿಕೆಗಾಗಿ ಸಲ್ಲಿಸುವ ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದು ಮತ್ತು ಅಂಥ ವಿವರಗಳನ್ನು ಒಳಗೊಂಡಿರತಕ್ಕದು ಮತ್ತು ನಿಯಮಿಸಿದ ಫೀಜಿನ ಸಂದಾಯಕ್ಕೆ ರುಜುವಾತಾಗಿ ರಸೀದಿಯು ಅದರ ಜೊತೆಯಲ್ಲಿರತಕ್ಕದು.

(2) ಅಂಥ ಅರ್ಜಿಯನ್ನು ಸ್ವೀಕರಿಸಿದ ನಂತರ, ಮಂಡಲಿಯು-

(ಎ) ಅರ್ಜಿಯು ನಿಯಮಿಸಿದ ನಮೂನೆಯಲ್ಲಿಲ್ಲದಿದ್ದರೆ ಅಥವಾ ನಿಯಮಿಸಿದ ಯಾವುದೇ ವಿವರಗಳನ್ನು ಒಳಗೊಂಡಿಲ್ಲದಿದ್ದರೆ, ಅರ್ಜಿಯನ್ನು ಅರ್ಜಿದಾರನಿಗೆ ವಾಪಸ್ಸು ಮಾಡತಕ್ಕದು ; ಅಥವಾ

(ಬಿ) ಅರ್ಜಿಯು ನಿಯಮಿಸಿದ ನಮೂನೆಯಲ್ಲಿದ್ದರೆ ಮತ್ತು ನಿಯಮಿಸಿದ ವಿವರಗಳನ್ನು ಒಳಗೊಂಡಿದ್ದರೆ, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ

ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಪ್ರಮಾಣಪತ್ರವನ್ನು ನೀಡತಕ್ಕುದು.

**13. ಪ್ರಮಾಣ ಪತ್ರದ ರದ್ದಿಯಾತಿ, ನಿಲಂಬನ ಇತ್ಯಾದಿ.**-(1) ಮಂಡಲಿಯು, ಯಾವುದೇ ಪ್ರಮಾಣಪತ್ರವನ್ನು ಯಾವುದೇ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ, ಎಂದರೆ-

(ಎ) ಪ್ರಮಾಣಪತ್ರದ ಧಾರಕನು ಪ್ರಮಾಣಪತ್ರದ ಯಾವುವೇ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿರುವನೆಂಬ; ಮತ್ತು

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಪ್ರಮಾಣಪತ್ರವನ್ನು ರದ್ದುಪಡಿಸುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಅವಶ್ಯವಾಗಿರುವುದೆಂಬ

- ಕಾರಣದ ಮೇಲೆ ರದ್ದುಗೊಳಿಸಬಹುದು.

(2) ಮಂಡಲಿಯು, ಬರಹದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, (1)ನೇ ಉಪಪ್ರಕರಣದಲ್ಲಿ ಹೇಳಿರುವ ಯಾವುವೇ ಆಧಾರಗಳ ಮೇಲೆ ಪ್ರಮಾಣ ಪತ್ರದ ರದ್ದಿಯಾತಿಯ ಪ್ರಶ್ನೆಯ ಪರ್ಯಾಲೋಚನೆಯು ಇತ್ಯರ್ಥದಲ್ಲಿರುವಾಗ ಹಾಗೆ ನಿಲಂಬನಗೊಳಿಸುವುದು ಅವಶ್ಯವಾಗಿದೆಯೆಂದು ಮನದಟ್ಟು ಮಾಡಿಕೊಂಡಿರುವಲ್ಲಿ, ಮಂಡಲಿಯು, ಲಿಖಿತ ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಲವತ್ತೈದು ದಿವಸಗಳನ್ನು ಮೀರದಂಥ ಅವಧಿಯವರೆಗೆ ಪ್ರಮಾಣಪತ್ರದ ಪ್ರವರ್ತನೆಯನ್ನು ನಿಲಂಬನಗೊಳಿಸಬಹುದು ಮತ್ತು ಅಂಥ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ, ನೋಂದಣಿಯನ್ನು ರದ್ದುಪಡಿಸಬೇಕೆಂಬ ಪ್ರಶ್ನೆಯು ನಿರ್ಧಾರವಾಗುವವರೆಗೂ ಪ್ರಮಾಣ ಪತ್ರದ ನಿಲಂಬನೆಯನ್ನು ಏಕೆ ವಿಸ್ತರಿಸಬಾರದು ಎಂಬುದರ ಬಗ್ಗೆ ಕಾರಣ ತೋರಿಸುವಂತೆ ಪ್ರಮಾಣಪತ್ರದ ಧಾರಕನನ್ನು ಅಗತ್ಯಪಡಿಸಬಹುದು.

(3) ಈ ಪ್ರಕರಣದ ಮೇರೆಗೆ ನೋಂದಣಿಯ ರದ್ದಿಯಾತಿಯ ಯಾವುದೇ ಆದೇಶವನ್ನು ಸಂಬಂಧಪಟ್ಟ ವ್ಯಕ್ತಿಗೆ, ಅಂಥ ರದ್ದಿಯಾತಿಯ ಆಧಾರಗಳಿಗೆ ಸಂಬಂಧಿಸಿದಂತೆ, ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ್ದ ಹೊರತು ಹೊರಡಿಸತಕ್ಕುದಲ್ಲ.

**14. ಅಪೀಲು.**- (1) 13ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ನಿಯಮಿಸಬಹುದಾದಂಥ ಅವಧಿಯೊಳಗೆ ಕೇಂದ್ರ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಯಾವುದೇ ಅಪೀಲನ್ನು, ಅದಕ್ಕಾಗಿ ನಿಯಮಿಸಿದ ಅವಧಿಯು ಮುಗಿದ ತರುವಾಯ ಸಲ್ಲಿಸಿದ್ದರೆ ಅದನ್ನು ಅಂಗೀಕರಿಸತಕ್ಕುದಲ್ಲ:

ಪರಂತು, ಅಪೀಲುದಾರನು, ನಿಯಮಿಸಿದ ಅವಧಿಯೊಳಗೆ ಅಪೀಲನ್ನು ಸಲ್ಲಿಸದಿರಲು ಸಾಕಷ್ಟು ಕಾರಣ ಇತ್ತೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡಿಕೊಟ್ಟರೆ, ಅಪೀಲು ಸ್ವೀಕರಿಸುವುದಕ್ಕೆ ನಿಯಮಿಸಿದ ಅವಧಿಯು ಮುಗಿದ ತರುವಾಯವೂ ಅದನ್ನು ಸ್ವೀಕರಿಸಬಹುದು.

(3) ಈ ಪ್ರಕರಣದ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅಪೀಲನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕುದು ಮತ್ತು ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶದ ಒಂದು ಪ್ರತಿ ಮತ್ತು ಅಂಥ ಫೀಜುಗಳು ಜೊತೆಯಲ್ಲಿರತಕ್ಕುದು.

(4) ಅಪೀಲನ್ನು ಇತ್ಯರ್ಥಗೊಳಿಸುವ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕುದು :

ಪರಂತು, ಅಪೀಲನ್ನು ಇತ್ಯರ್ಥಗೊಳಿಸುವುದಕ್ಕೆ ಮುಂಚೆ, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ನೀಡತಕ್ಕುದು.

(5) ಕೇಂದ್ರ ಸರ್ಕಾರವು, ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ವಿಪರ್ಯಯಗೊಳಿಸಬಹುದು.

**15. ಪ್ರಮಾಣ ಪತ್ರವಿಲ್ಲದೆ ರಫ್ತಿಗೆ ಅನುಮತಿ ನೀಡುವ ಅಧಿಕಾರ.**-ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ, ಹಾಗೆ ಮಾಡುವುದು ಅವಶ್ಯವಾಗಿದೆ ಅಥವಾ ಯುಕ್ತವಾಗಿದೆಯೆಂದು ಮನದಟ್ಟು ಮಾಡಿಕೊಂಡರೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳೇನಾದರೂ ಇದ್ದರೆ, ಅವುಗಳಿಗೊಳಪಟ್ಟು, ಪ್ರಮಾಣಪತ್ರವಿಲ್ಲದೆ ಸಂಬಾರ ಪದಾರ್ಥಗಳ ರಫ್ತಿನ ವ್ಯಾಪಾರವನ್ನು ಪ್ರಾರಂಭಿಸಲು ಅಥವಾ ನಡೆಸಲು ಯಾವುದೇ ನಿಕಾಯಕ್ಕೆ ಅಥವಾ ಇತರ ಏಜೆನ್ಸಿಗೆ ಅನುಮತಿಯನ್ನು ನೀಡಬಹುದು.

## ಅಧ್ಯಾಯ - V

## ಕೇಂದ್ರ ಸರ್ಕಾರದ ನಿಯಂತ್ರಣ

**16. ಏಲಕ್ಕಿಯ ಬೆಲೆ ಮತ್ತು ವಿತರಣೆಯ ನಿಯಂತ್ರಣಾಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬಗೆಯ ಏಲಕ್ಕಿಗೆ ಸಂಬಂಧಪಟ್ಟಂತೆ--

(ಎ) ಏಲಕ್ಕಿ ಬೆಳೆಗಾರನು ಅಥವಾ ಏಲಕ್ಕಿ ವ್ಯಾಪಾರಿಯು ಭಾರತದ ಮಾರುಕಟ್ಟೆಗಾಗಿ ಅಥವಾ ರಫ್ತಿಗಾಗಿ ಸಗಟು ಅಥವಾ ಚಿಲ್ಲರೆಯಾಗಿ ಕೇಳಬಹುದಾಗಿರುವ ಗರಿಷ್ಠ ಅಥವಾ ಕನಿಷ್ಠ ಬೆಲೆಯನ್ನು ಅಥವಾ ಗರಿಷ್ಠ ಮತ್ತು ಕನಿಷ್ಠ ಬೆಲೆಗಳನ್ನು; ಮತ್ತು

(ಬಿ) ಯಾವನೇ ವ್ಯಕ್ತಿಗೆ ಒಂದೇ ವಹಿವಾಟಿನಲ್ಲಿ ಮಾರಾಟ ಮಾಡಬಹುದಾಗಿರುವ ಗರಿಷ್ಠ ಪ್ರಮಾಣವನ್ನು

- ನಿಗದಿಪಡಿಸಬಹುದು.

(2) (1)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳ ಸಾಮಾನ್ಯತೆಗೆ ಬಾಧಕವಾಗದಂತೆ, ಅದರ ಮೇರೆಗೆ ಮಾಡಿದ ಯಾವುದೇ ಆದೇಶವು-

(ಎ) ಏಲಕ್ಕಿ ಉತ್ಪಾದನೆಯಲ್ಲಿ, ಸರಬರಾಜಿನಲ್ಲಿ ಅಥವಾ ವಿತರಣೆಯಲ್ಲಿ ಅಥವಾ ವ್ಯಾಪಾರದಲ್ಲಿ ಮತ್ತು ವಾಣಿಜ್ಯದಲ್ಲಿ ತೊಡಗಿದ ಯಾರೇ ವ್ಯಕ್ತಿಗಳನ್ನು, ಅವರ ವ್ಯಾಪಾರಕ್ಕೆ ಸಂಬಂಧಿಸುವಂಥ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು ಮತ್ತು ದಾಖಲೆಗಳನ್ನು ಇಡಲು ಮತ್ತು ತನಿಖೆಗಾಗಿ ಹಾಜರ್ಪಡಿಸಲು ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅದಕ್ಕೆ ಸಂಬಂಧಿಸಿದಂಥ ಮಾಹಿತಿಯನ್ನು ಒದಗಿಸಲು ಅಗತ್ಯ ಪಡಿಸುವುದಕ್ಕಾಗಿ; ಮತ್ತು

(ಬಿ) ಮುಖ್ಯವಾಗಿ ಆವರಣಗಳನ್ನು, ವಾಹನಗಳನ್ನು, ನೌಕೆಗಳನ್ನು ಮತ್ತು ವಿಮಾನಗಳನ್ನು ಪ್ರವೇಶಿಸಿ ಶೋಧಿಸುವುದು ಮತ್ತು ಅಂಥ ಶೋಧನೆ ಮಾಡಲು ಅಧಿಕಾರ ನೀಡಿದಂಥ ವ್ಯಕ್ತಿಯು, ಆದೇಶದ ಉಲ್ಲಂಘನೆಯನ್ನು ಮಾಡಲಾಗಿದೆ, ಮಾಡಲಾಗುತ್ತಿದೆ ಅಥವಾ ಮಾಡುವ ಸಂಭವವಿದೆಯೆಂದು ನಂಬಲು ಕಾರಣ ಇರುವುದರಿಂದಾಗಿ ಏಲಕ್ಕಿಯನ್ನು ವಶಪಡಿಸಿಕೊಳ್ಳುವುದೂ ಸೇರಿದಂತೆ ಅಂಥ ಇತರ ವಿಷಯಗಳಿಗಾಗಿ

- ಉಪಬಂಧಿಸಬಹುದು.

**17. ಏಲಕ್ಕಿಯ ಆಮದನ್ನು ನಿಷೇಧಿಸುವ ಅಥವಾ ನಿಯಂತ್ರಿಸುವ ಅಧಿಕಾರ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಸಾಮಾನ್ಯವಾಗಿಯಾಗಲೀ ಅಥವಾ ನಿರ್ದಿಷ್ಟ ವಿಷಯಗಳ ವರ್ಗಗಳಲ್ಲಿಯಾಗಲಿ, ಏಲಕ್ಕಿ ಆಮದನ್ನು ನಿಷೇಧಿಸಲು, ನಿರ್ಬಂಧಿಸಲು ಅಥವಾ ಅನ್ಯಥಾ ನಿಯಂತ್ರಿಸಲು ಉಪಬಂಧವನ್ನು ರಚಿಸಬಹುದು.

**18. ನಿರ್ದೇಶನಗಳನ್ನು ಹೊರಡಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಪೂರ್ವೋಕ್ತ ಉಪಬಂಧಗಳಿಗೆ ಬಾಧಕವಾಗದಂತೆ, ಮಂಡಲಿಯು ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳು ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ ಕಾರ್ಯನೀತಿ ಪ್ರಶ್ನೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅದಕ್ಕೆ ಬರಹದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕುದು:

ಪರಂತು, ಸಾಧ್ಯವಾದಷ್ಟು ಮಟ್ಟಿಗೆ, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ ಮಂಡಲಿಗೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡತಕ್ಕುದು.

(2) ಒಂದು ಪ್ರಶ್ನೆಯು ಕಾರ್ಯನೀತಿಯ ಪ್ರಶ್ನೆಯದ್ದಾಗಿದೆಯೇ ಅಥವಾ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕುದು.

**19. ಮಂಡಲಿಯನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಯಾವುದೇ ಕಾಲದಲ್ಲಿ ಕೇಂದ್ರ ಸರ್ಕಾರವು –

(ಎ) ಗಂಭೀರ ತುರ್ತು ಪರಿಸ್ಥಿತಿಯ ಕಾರಣದಿಂದ, ಮಂಡಲಿಯು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ವಿಧಿಸಿದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥವಾಗಿದೆಯೆಂದು; ಅಥವಾ

(ಬಿ) ಮಂಡಲಿಯು, ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ನೀಡಿದ ನಿರ್ದೇಶನವನ್ನು ಪಾಲಿಸುವಲ್ಲಿ ಅಥವಾ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಿದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಪದೇ ಪದೇ ತಪ್ಪು ಮಾಡುತ್ತಿದೆಯೆಂದು ಮತ್ತು ಅಂಥ ತಪ್ಪಿನ ಪರಿಣಾಮವಾಗಿ ಮಂಡಲಿಯ ಆರ್ಥಿಕ ಪರಿಸ್ಥಿತಿಯು ಅಥವಾ ಮಂಡಲಿಯ ಆಡಳಿತವು ಅವನತಿಹೊಂದಿದೆಯೆಂದು ; ಅಥವಾ

(ಸಿ) ಸಾರ್ವಜನಿಕ ಹಿತದೃಷ್ಟಿಯಿಂದ ಮಂಡಲಿಯನ್ನು ರದ್ದುಗೊಳಿಸುವುದನ್ನು ಅವಶ್ಯಗೊಳಿಸುವಂಥ ಪರಿಸ್ಥಿತಿಗಳು ಇವೆ ಎಂದು

– ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ, ಆರು ತಿಂಗಳುಗಳನ್ನು ಮೀರದ ಅಂಥ ಅವಧಿಯವರೆಗೆ ಮಂಡಲಿಯನ್ನು ರದ್ದುಗೊಳಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯನ್ನು ರದ್ದುಗೊಳಿಸಿದ ಅಧಿಸೂಚನೆಯ ಪ್ರಕಟಣೆಯ ತರುವಾಯ,–

(ಎ) ರದ್ದಾದ ದಿನಾಂಕದಿಂದ ಮಂಡಲಿಯ ಎಲ್ಲ ಸದಸ್ಯರು ತಮ್ಮ ಅಂಥ ಪದಗಳನ್ನು ಖಾಲಿಮಾಡತಕ್ಕುದು ;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ, ಮಂಡಲಿ ಮೂಲಕ ಅಥವಾ ಅದರ ಪರವಾಗಿ ಚಲಾಯಿಸಬಹುದಾಗಿರುವ ಅಥವಾ ನಿರ್ವಹಿಸಬಹುದಾಗಿರುವ ಎಲ್ಲ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು

ಕರ್ತವ್ಯಗಳನ್ನು (3)ನೇ ಉಪಪ್ರಕರಣದ ಮೇರೆಗೆ ಮಂಡಲಿಯನ್ನು ಪುನರ್ ರಚಿಸುವವರೆಗೆ, ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕುದು ಮತ್ತು ನಿರ್ವಹಿಸತಕ್ಕುದು; ಮತ್ತು

(ಸಿ) ಮಂಡಲಿಯ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಎಲ್ಲ ಸ್ವತ್ತು, (3)ನೇ ಉಪಪ್ರಕರಣದ ಮೇರೆಗೆ ಮಂಡಲಿಯನ್ನು ಪುನರ್‌ರಚಿಸುವವರೆಗೂ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದುಪಡಿಸಿರುವ ಅವಧಿಯು ಮುಕ್ತಾಯವಾದ ತರುವಾಯ, ಕೇಂದ್ರ ಸರ್ಕಾರವು ಹೊಸ ನೇಮಕಾತಿಯ ಮೂಲಕ ಮಂಡಲಿಯನ್ನು ಪುನರ್‌ರಚಿಸಬಹುದು ಮತ್ತು ಅಂಥ ಸಂದರ್ಭದಲ್ಲಿ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತಮ್ಮ ಪದಗಳನ್ನು ಖಾಲಿಮಾಡಿದ ಯಾರೇ ವ್ಯಕ್ತಿಯು ಅಥವಾ ವ್ಯಕ್ತಿಗಳು, ನೇಮಕಾತಿಗೆ ಅನರ್ಹರೆಂಬುದಾಗಿ ಭಾವಿಸತಕ್ಕುದಲ್ಲ :

ಪರಂತು, ಕೇಂದ್ರ ಸರ್ಕಾರವು, ಯಾವುದೇ ಕಾಲದಲ್ಲಿ, ರದ್ದುಪಡಿಸಿರುವ ಅವಧಿಯ ಮುಕ್ತಾಯಕ್ಕೆ ಮುಂಚೆ, ಈ ಉಪಪ್ರಕರಣದ ಮೇರೆಗೆ ಕ್ರಮ ಕೈಗೊಳ್ಳಬಹುದು.

(4) ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಒಂದು ಅಧಿಸೂಚನೆಯನ್ನು ಹೊರಡಿಸತಕ್ಕುದು ಮತ್ತು ಈ ಪ್ರಕರಣದ ಮೇರೆಗೆ ಕೈಗೊಂಡ ಯಾವುದೇ ಕ್ರಮದ ಮತ್ತು ಅಂಥ ಕ್ರಮಕ್ಕೆ ಕಾರಣವಾದಂಥ ಪರಿಸ್ಥಿತಿಗಳ ಪೂರ್ಣ ವರದಿಯನ್ನು ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕುದು.

## ಅಧ್ಯಾಯ – VI

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**20. ಕೇಂದ್ರ ಸರ್ಕಾರದ ಅನುದಾನಗಳು ಮತ್ತು ಸಾಲಗಳು.**– ಕೇಂದ್ರ ಸರ್ಕಾರವು, ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಯುಕ್ತ ಧನ ವಿನಿಯೋಗವನ್ನು ಮಾಡಿದ ತರುವಾಯ, ಆ ಸರ್ಕಾರವು ತಾನು ಅವಶ್ಯವೆಂದು ಪರಿಗಣಿಸಬಹುದಾದಷ್ಟು ಹಣದ ಮೊತ್ತಗಳ ಅನುದಾನಗಳನ್ನು ಮತ್ತು ಸಾಲಗಳನ್ನು ಮಂಡಲಿಗೆ ನೀಡಬಹುದು.

**21. ಮಂಡಲಿಯ ನಿಧಿ.**– (1) ಸಂಬಾರ ಪದಾರ್ಥಗಳ ಮಂಡಲಿ ನಿಧಿ ಎಂದು ಕರೆಯಲ್ಪಡುವ ಒಂದು ನಿಧಿಯನ್ನು ರಚಿಸತಕ್ಕುದು ಮತ್ತು ಅದಕ್ಕೆ –

(ಎ) 20ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮಂಡಲಿಗೆ ನೀಡಿದ ಯಾವುವೇ ಅನುದಾನಗಳನ್ನು ಮತ್ತು ಸಾಲಗಳನ್ನು;

(ಬಿ) ಈ ಅಧಿನಿಯಮದ ಮೇರೆಗೆ ನೀಡಿದ ಪ್ರಮಾಣಪತ್ರಗಳಿಗೆ ಸಂಬಂಧಪಟ್ಟಂತೆ ವಿಧಿಸಿದ ಮತ್ತು ವಸೂಲು ಮಾಡಿದ ಎಲ್ಲ ಫೀಜುಗಳನ್ನು ; ಮತ್ತು

(ಸಿ) ಕೇಂದ್ರ ಸರ್ಕಾರವು ತೀರ್ಮಾನಿಸಬಹುದಾದಂಥ ಇತರ ಮೂಲಗಳಿಂದ ಮಂಡಲಿಯು ಸ್ವೀಕರಿಸಿದ ಎಲ್ಲ ಮೊತ್ತಗಳನ್ನು

– ಜಮೆ ಮಾಡತಕ್ಕುದು.

(2) ನಿಧಿಯನ್ನು –

(ಎ) ಮಂಡಲಿಯ ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ವೇತನವನ್ನು, ಭತ್ಯೆಗಳನ್ನು ಮತ್ತು ಇತರ ಸಂಭಾವನೆಯನ್ನು ;

(ಬಿ) 7ನೇ ಪ್ರಕರಣದ ಮೇರೆಗೆ ಮಂಡಲಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿನ ವೆಚ್ಚಗಳನ್ನು ; ಮತ್ತು

(ಸಿ) ಈ ಅಧಿನಿಯಮದ ಮೂಲಕ ಪ್ರಾಧಿಕೃತವಾದ ಗುರಿಗಳ ಮೇಲಣ ಮತ್ತು ಉದ್ದೇಶಗಳ ಸಲುವಾದ ವೆಚ್ಚಗಳನ್ನು

– ಭರಿಸಲು ವಿನಿಯೋಗಿಸತಕ್ಕುದು.

**22. ಬಜೆಟ್.**– ಮಂಡಲಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿ ಹಣಕಾಸು ವರ್ಷಕ್ಕೆ ಮುಂದಿನ ಹಣಕಾಸು ವರ್ಷದ ಮಂಡಲಿಯ ಅಂದಾಜು ಜಮೆಗಳನ್ನು ಮತ್ತು ವೆಚ್ಚಗಳನ್ನು ತೋರಿಸುವ ತನ್ನ ಬಜೆಟನ್ನು ಸಿದ್ಧಪಡಿಸತಕ್ಕುದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು.

**23. ವಾರ್ಷಿಕ ವರದಿ.**– ಮಂಡಲಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿ ಹಣಕಾಸು ವರ್ಷಕ್ಕೆ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ತನ್ನ ಚಟುವಟಿಕೆಗಳ ಪೂರ್ಣ ವಿವರಗಳನ್ನು ನೀಡುವ ತನ್ನ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕುದು ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕುದು.

**24. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**– ಮಂಡಲಿಯ ಲೆಕ್ಕಪತ್ರಗಳನ್ನು, ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನ ಜೊತೆ ಸಮಾಲೋಚಿಸಿ, ನಿಯಮಿಸಬಹುದಾದಂಥ ರೀತಿಯಲ್ಲಿ ಇಡತಕ್ಕುದು ಮತ್ತು ಲೆಕ್ಕ ಪರಿಶೋಧನೆ ಮಾಡಿಸತಕ್ಕುದು ಮತ್ತು ಮಂಡಲಿಯು ತನ್ನ ಲೆಕ್ಕಪತ್ರಗಳ ಪರಿಶೋಧಿತ ಪ್ರತಿಯನ್ನು ಮತ್ತು ಅದರ ಮೇಲಿನ ಲೆಕ್ಕಪರಿಶೋಧಕನ ವರದಿಯನ್ನು ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು.

**25. ವಾರ್ಷಿಕ ವರದಿಯನ್ನು ಮತ್ತು ಲೆಕ್ಕಪರಿಶೋಧಕನ ವರದಿಯನ್ನು ಸಂಸತ್ತಿನ ಮುಂದೆ ಇಡತಕ್ಕುದು.**– ಕೇಂದ್ರ ಸರ್ಕಾರವು, ವಾರ್ಷಿಕ ವರದಿಯನ್ನು ಮತ್ತು ಲೆಕ್ಕಪರಿಶೋಧಕರ ವರದಿಯನ್ನು, ಅವನ್ನು ಸ್ವೀಕರಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕುದು.

## ಅಧ್ಯಾಯ – VII

### ಸಂಕೀರ್ಣ

**26. ಸುಳ್ಳು ವಿವರಣ ಪಟ್ಟಿ ತಯಾರಿಕೆಗೆ ದಂಡ.**– ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವುದೇ ವಿವರಣ ಪಟ್ಟಿಯನ್ನು ಸಲ್ಲಿಸಲು ಅಗತ್ಯಪಡಿಸಿದ್ದು, ಅಂಥ ವಿವರಣ ಪಟ್ಟಿಯನ್ನು ಸಲ್ಲಿಸಲು ತಪ್ಪುವ ಅಥವಾ ಯಾವುದೇ ಸುಳ್ಳು ವಿವರಣೆಯನ್ನು ಒಳಗೊಂಡಿರುವ ವಿವರಣ ಪಟ್ಟಿಯನ್ನು ಸಲ್ಲಿಸುವ ಮತ್ತು ಅದು ಸುಳ್ಳೆಂದು ತನಗೇ ತಿಳಿದಿರುವ ಅಥವಾ ನಿಜವೆಂದು ತನಗೇ ನಂಬಲಾಗದಿರುವ ವಿವರ ಪಟ್ಟಿಯನ್ನು ಸಲ್ಲಿಸುವ ಯಾರೇ ವ್ಯಕ್ತಿಯು, ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**27. ಮಂಡಲಿಯ ಅಧಿಕಾರಿಯನ್ನು ಅಥವಾ ಸದಸ್ಯನನ್ನು ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಡ್ಡಿಪಡಿಸಿದರೆ ಮತ್ತು ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸಲು ತಪ್ಪಿದರೆ ದಂಡಗಳು.**– ಯಾರೇ ವ್ಯಕ್ತಿಯು,–

(ಎ) ಬರಹದಲ್ಲಿ, ಅಧ್ಯಕ್ಷನಿಂದ ಅಧಿಕೃತನಾದ ಯಾರೇ ಸದಸ್ಯನನ್ನು ಅಥವಾ ಈ ಬಗ್ಗೆ ಮಂಡಲಿಯಿಂದ ಅಧಿಕೃತನಾದ ಅದರ ಯಾರೇ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಮಂಡಲಿಯಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅವನಿಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ ಅಥವಾ ವಿಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವಲ್ಲಿ ಅಡ್ಡಿಪಡಿಸಿದರೆ; ಅಥವಾ

(ಬಿ) ಯಾವುದೇ ಲೆಕ್ಕಪುಸ್ತಕವು ಅಥವಾ ಇತರ ದಾಖಲೆಯು ಅವನ ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿದ್ದು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅದನ್ನು ಹಾಜರುಪಡಿಸಲು ಅಗತ್ಯಪಡಿಸಿರುವಾಗ ಅಂಥ ಪುಸ್ತಕ ಅಥವಾ ದಾಖಲೆಯನ್ನು ಹಾಜರುಪಡಿಸಲು ತಪ್ಪಿದರೆ

– ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**28. ಬೆಲೆ ನಿಯಂತ್ರಣ ಮುಂತಾದವಕ್ಕೆ ಸಂಬಂಧಿಸುವ ಆದೇಶದ ಉಲ್ಲಂಘನೆಗಾಗಿ ದಂಡ.**– (1) 16ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು ಮತ್ತು ಯಾವ ಸ್ವತ್ತಿಗೆ ಸಂಬಂಧಪಟ್ಟಂತೆ ಆದೇಶವನ್ನು ಉಲ್ಲಂಘಿಸಲಾಗಿದೆಯೋ ಆ ಸ್ವತ್ತು, ಅಥವಾ ನ್ಯಾಯಾಲಯವು ಯೋಗ್ಯವೆಂದು ಭಾವಿಸಬಹುದಾದಂಥ ಅದರ ಭಾಗವು ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲು ಆಗತಕ್ಕುದು.

(2) 16ನೇ ಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು ಉಲ್ಲಂಘಿಸಲು ಪ್ರಯತ್ನಿಸುವ ಅಥವಾ ಉಲ್ಲಂಘಿಸುವಂತೆ ದುಷ್ಪ್ರೇರಿಸುವ ಯಾರೇ ವ್ಯಕ್ತಿಯು, ಆ ಆದೇಶವನ್ನು ಉಲ್ಲಂಘಿಸಿದ್ದಾನೆ ಎಂದು ಭಾವಿಸತಕ್ಕುದು.

**29. 11ನೇ ಪ್ರಕರಣದ ಅಥವಾ 17ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶದ ಉಲ್ಲಂಘನೆಗಾಗಿ ದಂಡನೆಗಳು.**– 11ನೇ ಪ್ರಕರಣದ ಉಪಬಂಧಗಳನ್ನು ಅಥವಾ 17ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ, ಅವನು ಸೀಮಾ ಶುಲ್ಕ ಅಧಿನಿಯಮ, 1962 (1962ರ 52)ರ ಉಪಬಂಧಗಳ ಮೇರೆಗೆ ಯಾವ ಜಪ್ತಿಗೆ ಅಥವಾ ದಂಡಕ್ಕೆ ಹೊಣೆಯಾಗುವನೋ ಆ ಯಾವುದೇ ಜಪ್ತಿಗೆ ಅಥವಾ ದಂಡಕ್ಕೆ ಬಾಧಕವಾಗದಂತೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅವನು ದಂಡನೀಯನಾಗತಕ್ಕುದು.

**30. ಇತರ ದಂಡಗಳು.**– ಯಾವ ಉಪಬಂಧಗಳ ಉಲ್ಲಂಘನೆಗಾಗಿ 26ನೇ, 27ನೇ, 28ನೇ ಮತ್ತು 29ನೇ ಪ್ರಕರಣದಲ್ಲಿ ದಂಡನೆಯನ್ನು ಉಪಬಂಧಿಸಲಾಗಿದೆಯೋ ಆ ಉಪಬಂಧವನ್ನು ಹೊರತುಪಡಿಸಿ, ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುವೇ

ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಪ್ರಯತ್ನಿಸುವ ಅಥವಾ ಉಲ್ಲಂಘನೆಯನ್ನು ದುಷ್ಪ್ರೇರಿಸುವ ಯಾರೇ ಆಗಲಿ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಅಂಥ ಮೊದಲನೇ ಉಲ್ಲಂಘನೆಗಾಗಿ, ಅಪರಾಧ ನಿರ್ಣಯದ ತರುವಾಯ ಅಂಥ ಉಲ್ಲಂಘನೆಯು ಮುಂದುವರೆದ ಅವಧಿಯ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**31. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರ ಹೊಂದಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ದೋಷಿ ಎಂದು ಭಾವಿಸತಕ್ಕುದು ಮತ್ತು ಆ ಪ್ರಕಾರ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು:

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವನೇ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿರುವುದು ಯಾವುದೂ ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ಉಪೇಕ್ಷೆಯಿಂದ ನಡೆಯಿತೆಂದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ದೋಷಿ ಎಂದು ಭಾವಿಸತಕ್ಕುದು ಮತ್ತು ಆ ಪ್ರಕಾರ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು.

ವಿವರಣೆ :– ಈ ಪ್ರಕರಣದ ಉದ್ದೇಶಗಳಿಗಾಗಿ–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯವನ್ನು ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಫರ್ಮಿನ ಪಾಲುಗಾರ.

**32. 1962ರ ಅಧಿನಿಯಮ 52ರ ಉಪಬಂಧಗಳು ಸಂಬಾರ ಪದಾರ್ಥಗಳ ರಫ್ತಿಗೆ ಮತ್ತು ಏಲಕ್ಕಿಯ ಆಮದಿಗೆ ಅನ್ವಯವಾಗುವುದು.–**

(ಎ) ಈ ಅಧಿನಿಯಮದ 11ನೇ ಪ್ರಕರಣವು ಅನ್ವಯವಾಗುವ ಎಲ್ಲ ಸಂಬಾರ ಪದಾರ್ಥಗಳನ್ನು ; ಮತ್ತು

(ಬಿ) ಈ ಅಧಿನಿಯಮದ 17ನೇ ಪ್ರಕರಣದ ಮೇರೆಗಿನ ಯಾವುದೇ ಆದೇಶವು ಅನ್ವಯವಾಗುವ ಏಲಕ್ಕಿಯನ್ನು

– ಸೀಮಾಶುಲ್ಕ ಅಧಿನಿಯಮ, 1962ರ 11ನೇ ಪ್ರಕರಣದ ಮೇರೆಗೆ ರಫ್ತು ಅಥವಾ ಆಮದು ನಿಷೇಧಿಸಲ್ಪಟ್ಟ ಅಥವಾ ಪ್ರತಿಬಂಧಿಸಲ್ಪಟ್ಟ ಸರಕುಗಳೆಂದು ಭಾವಿಸತಕ್ಕುದು, ಮತ್ತು ಆ ಪ್ರಕಾರ ಆ ಅಧಿನಿಯಮದ ಎಲ್ಲ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕುದು.

**33. ಕೇಂದ್ರ ಸರ್ಕಾರದ ಪೂರ್ವಮಂಜೂರಾತಿ.**– ಕೇಂದ್ರ ಸರ್ಕಾರದ ಪೂರ್ವಮಂಜೂರಾತಿ ಇಲ್ಲದೆ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನನ್ನೂ ಹೂಡತಕ್ಕುದಲ್ಲ.

**34. ಪ್ರತ್ಯಾಯೋಜನೆ.**– ಮಂಡಲಿಯು, ಬರಹದಲ್ಲಿನ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಮಂಡಲಿಯ ಅಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಯಾರೇ ಅಧಿಕಾರಿಗೆ ತಾನು ಅವಶ್ಯವೆಂದು ಭಾವಿಸುವಂಥ ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು (39ನೇ ಪ್ರಕರಣದ ಮೇರೆಗಿನ ಅಧಿಕಾರವನ್ನುಳಿದು) ಪ್ರತ್ಯಾಯೋಜಿಸಬಹುದು.

**35. ಮಂಡಲಿಯ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಸರ್ಕಾರಿ ನೌಕರರಾಗಿರುವುದು :**– ಮಂಡಲಿಯ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರು, ಈ ಅಧಿನಿಯಮದ ಯಾವುವೇ ಉಪಬಂಧಗಳಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ನಿರ್ವಹಿಸುತ್ತಾರೆಂದು ತಾತ್ಪರ್ಯವಾಗುವಾಗ, ಅವರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥದಲ್ಲಿ ಲೋಕ ನೌಕರರೆಂದು ಭಾವಿಸತಕ್ಕುದು.

**36. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**– ಸರ್ಕಾರದ, ಅಥವಾ ಮಂಡಲಿಯ ಅಥವಾ ಅದು ನೇಮಕ ಮಾಡಿದ ಯಾವುದೇ ಸಮಿತಿಯ ಅಥವಾ ಮಂಡಲಿಯ ಅಥವಾ ಅಂಥ ಸಮಿತಿಯ ಯಾವನೇ ಸದಸ್ಯನ, ಅಥವಾ ಸರ್ಕಾರದ ಅಥವಾ ಮಂಡಲಿಯ ಯಾರೇ ಅಧಿಕಾರಿಯ ಅಥವಾ ನೌಕರನ ಅಥವಾ ಸರ್ಕಾರದಿಂದ ಅಥವಾ ಮಂಡಲಿಯಿಂದ ಅಧಿಕೃತನಾದ ಯಾರೇ ಇತರ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಅಥವಾ ವಿನಿಯಮನಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವುದೇ ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕುದಲ್ಲ.

**37. ಪ್ರವೇಶಾಧಿಕಾರ.**– ಈ ಬಗ್ಗೆ ರಚಿಸಿದ ಯಾವುದೇ ನಿಯಮಕ್ಕೊಳಪಟ್ಟು, ಈ ಬಗ್ಗೆ ಮಂಡಲಿಯಿಂದ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತನಾದ ಯಾರೇ ವ್ಯಕ್ತಿಯು, ಈ ಅಧಿನಿಯಮದ ಯಾವುವೇ ಉದ್ದೇಶಗಳಿಗಾಗಿ ಹಾಗೆ ಮಾಡುವುದು ಅವಶ್ಯವಿರುವ ಎಲ್ಲ ಯುಕ್ತ ಕಾಲಗಳಲ್ಲಿ ಯಾವುದೇ ಭೂಮಿಯನ್ನು ಅಥವಾ ಆವರಣಗಳನ್ನು ಪ್ರವೇಶಿಸಬಹುದು ಮತ್ತು ಯಾವುದೇ ತನಿಖೆಯನ್ನು ಅಥವಾ ವಿಚಾರಣೆಯನ್ನು ಮಾಡಬಹುದು ಅಥವಾ ನಿಯಮಿಸಬಹುದಾದಂಥ ಇತರ ಕೃತ್ಯವನ್ನು ಅಥವಾ ಕಾರ್ಯವನ್ನು ಮಾಡಬಹುದು :

ಪರಂತು, ಅಂಥ ಯಾರೇ ವ್ಯಕ್ತಿಯು, ಹಾಗೆ ಮಾಡುವ ತನ್ನ ಆಶಯದ ಲಿಖಿತ ನೋಟೀಸನ್ನು ಅಂಥ ಅಧಿಭೋಗದಾರನಿಗೆ ಕಡೇ ಪಕ್ಷ ಇಪ್ಪತ್ತನಾಲ್ಕು ಗಂಟೆಗಳ ಮುಂಚೆ ಕೊಟ್ಟಿದ್ದ ಹೊರತು (ಅದರ ಅಧಿಭೋಗದಾರನ ಸಮ್ಮತಿಯಿಂದ ಹೊರತು) ಯಾವುದೇ ಕಟ್ಟಡವನ್ನು ಅಥವಾ ಯಾವುದೇ ಆವರಣವನ್ನು ಅಥವಾ ವಾಸದ ಮನೆಗೆ ಹೊಂದಿಕೊಂಡಿರುವ ತೋಟವನ್ನು ಪ್ರವೇಶಿಸತಕ್ಕುದಲ್ಲ.

**38. ನಿಯಮ ರಚನಾಧಿಕಾರ.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಸದಸ್ಯರ ಸಂಖ್ಯೆ ;

(ಬಿ) 3ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಸದಸ್ಯರ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು;

(ಸಿ) 3ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು ;

(ಡಿ) 3ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಉಪಾಧ್ಯಕ್ಷನ ಅಧಿಕಾರಗಳು ಮತ್ತು ಪ್ರಕಾರ್ಯಗಳು ;

(ಇ) 5ನೇ ಪ್ರಕರಣದ ಮೇರೆಗೆ ಸಮಿತಿಗಳ ರಚನೆ ;

(ಎಫ್) 7ನೇ ಪ್ರಕರಣದ (1)ನೇ ಉಪಪ್ರಕರಣದ (viii)ನೇ ಖಂಡದ ಮೇರೆಗೆ ರಫ್ತಿಗಾಗಿ ಸಂಬಾರ ಪದಾರ್ಥಗಳ ತಯಾರಕರಿಗೆ ಲೈಸೆನ್ಸುಗಳನ್ನು ನೀಡುವ ಬಗ್ಗೆ ನಿಬಂಧನೆಗಳು ಮತ್ತು ಷರತ್ತುಗಳು;

(ಜಿ) 10ನೇ ಪ್ರಕರಣದ ಮೇರೆಗೆ ನೋಂದಾಯಿತ ಒಡೆಯನು ಮಂಡಲಿಗೆ ವಿವರಣಪಟ್ಟಿಯನ್ನು ಸಲ್ಲಿಸಬಹುದಾದ ನಮೂನೆ, ರೀತಿ ಮತ್ತು ಕಾಲ;

(ಹೆಚ್) 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯ ನಮೂನೆ ಮತ್ತು ಫೀಜುಗಳು;

(ಐ) 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪೀಲಿಗೆ ಕಾಲಪರಿಮಿತಿ;

(ಜೆ) 14ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪೀಲಿನ ನಮೂನೆ ಮತ್ತು ಸಂದಾಯ ಮಾಡಬೇಕಾದ ಫೀಜುಗಳು ;

(ಕೆ) 14ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಪೀಲಿನ ವಿಲೆಗಾಗಿ ಪ್ರಕ್ರಿಯೆ;

(ಎಲ್) 22ನೇ ಪ್ರಕರಣದ ಮೇರೆಗೆ ಮಂಡಲಿಯು ತನ್ನ ಬಜೆಟನ್ನು ಮತ್ತು 23ನೇ ಪ್ರಕರಣದ ಮೇರೆಗೆ ತನ್ನ ವಾರ್ಷಿಕ ವರದಿಯನ್ನು ತಯಾರಿಸಬೇಕಾದ ನಮೂನೆ ಮತ್ತು ಕಾಲ;

(ಎಂ) ಯಾವ ರೀತಿಯಲ್ಲಿ ಮಂಡಲಿಯ ಲೆಕ್ಕಪತ್ರಗಳನ್ನು ಇಟ್ಟಿರಬೇಕು ಮತ್ತು ಪರಿಶೋಧಿಸಬೇಕು ಮತ್ತು ಯಾವ ದಿನಾಂಕಕ್ಕೆ ಮುಂಚೆ ಲೆಕ್ಕಪತ್ರಗಳ ಪರಿಶೋಧಿತ ಪ್ರತಿಗಳನ್ನು ಪ್ರಕರಣ 24ರ ಮೇರೆಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು;

(ಎನ್) 37ನೇ ಪ್ರಕರಣದ ಮೇರೆಗೆ ಪ್ರವೇಶಾಧಿಕಾರವನ್ನು ಚಲಾಯಿಸುವ ಬಗ್ಗೆ ಷರತ್ತುಗಳು ಮತ್ತು ನಿರ್ಬಂಧಗಳು ;

(ಓ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಯಾವುದಕ್ಕೆ ಸಂಬಂಧಪಟ್ಟಂತೆ ನಿಯಮಗಳ ಮೂಲಕ ಉಪಬಂಧ ಕಲ್ಪಿಸಬೇಕಾದ ಅಥವಾ ಕಲ್ಪಿಸಬಹುದಾದ ಯಾವುದೇ ಇತರ ವಿಷಯ.

**39. ವಿನಿಯಮಗಳ ರಚನಾಧಿಕಾರ.–** (1) ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮಕ್ಕೆ ಮತ್ತು ನಿಯಮಗಳಿಗೆ ಸುಸಂಗತವಾಗಿರುವ ವಿನಿಯಮಗಳನ್ನು ರಚಿಸಬಹುದು.

(2) ಮುಖ್ಯವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ವಿನಿಯಮಗಳನ್ನು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ :–

(ಎ) 4ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಕಾರ್ಯದರ್ಶಿಯ ಮತ್ತು ಇತರ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ; ಮತ್ತು

(ಬಿ) 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಪ್ರಮಾಣ ಪತ್ರವನ್ನು ನೀಡಬಹುದಾದ ನಿಬಂಧನೆಗಳು ಮತ್ತು ಷರತ್ತುಗಳು.

**40. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇರಿಸತಕ್ಕದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇರಿಸತಕ್ಕದು ಮತ್ತು ಮೇಲೆ ಹೇಳಲಾದ ಅಧಿವೇಶನದ ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನ ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮನವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಅಥವಾ ವಿನಿಯಮನವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದು ಅಥವಾ ಪರಿಣಾಮಕಾರಿಯಾಗತಕ್ಕದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದು.

**41. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು :

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳು ಮುಗಿದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದು.

**42. ನಿರಸನ ಮತ್ತು ಉಳಿಸುವಿಕೆಗಳು.–** (1) ಏಲಕ್ಕಿ ಅಧಿನಿಯಮ, 1965 (1965ರ 42)ರ 3ರಿಂದ 33ರ ವರೆಗಿನ ಪ್ರಕರಣಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಂಥ ಕಾರ್ಯದ ಅಥವಾ ಕ್ರಮದ ಮಟ್ಟಿಗೆ, ಅಂಥ ಕಾರ್ಯವನ್ನು ಮಾಡಿದ್ದರೆ ಅಥವಾ ಅಂಥ ಕ್ರಮವನ್ನು ಕೈಗೊಂಡಿದ್ದರೆ ಸದರಿ ಉಪಬಂಧಗಳು ಜಾರಿಯಲ್ಲಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕುದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಪಡಿಸುವವರೆಗೂ ಆ ಪ್ರಕಾರವಾಗಿ ಆ ಕಾರ್ಯವು ಅಥವಾ ಆ ಕ್ರಮವು ಜಾರಿಯಲ್ಲಿರುವುದು ಮುಂದುವರೆಯತಕ್ಕುದು.

**ಅನುಸೂಚಿ**

[ ಪ್ರಕರಣ 2 (ಎನ್) ನೋಡಿ ]

ಸಾರಿನ ಪುಡಿ, ಸಂಬಾರು ಎಣ್ಣೆ, ಚಂಚಲ ತೈಲ (ಒಲೆರೋಸಿನ್) ಮತ್ತು ಸಂಬಾರು ಪ್ರಮಾಣವು ಅಧಿಕವಾಗಿರುವ ಇತರ ಮಿಶ್ರಣಗಳೂ ಸೇರಿ ಯಾವುದೇ ರೂಪದಲ್ಲಿರುವ –

1. ಏಲಕ್ಕಿ
2. ಮೆಣಸು
3. ಮೆಣಸಿನಕಾಯಿ
4. ಶುಂಠಿ
5. ಅರಿಶಿನ
6. ಧನಿಯ
7. ಜೀರಿಗೆ
8. ಫೆನೆಲ್
9. ಮೆಂತ್ಯ
10. ಸೆಲೆರಿ
11. ಸೋಪು ಬೀಜ
12. ಓಮದ ಗಿಡ
13. ಸೋಪಿನ ಗಿಡ
14. ಸಬ್ಬಸಿಗೆ
15. ದಾಲ್ಚಿನ್ನಿ
16. ಕೀಳ್ತೆರದ ದಾಲ್ಚಿನ್ನಿ (ಕಾಸಿಯೆ)
17. ಬೆಳ್ಳುಳ್ಳಿ
18. ಕರಿಬೇವು ಸೊಪ್ಪು
19. ಕಾಕಂಬಿ ಗಿಡ
20. ಪುದೀನ
21. ಸಾಸಿವೆ

22. ಪಾರ್ಸ್ಲಿ
23. ದಾಳಿಂಬೆ ಬೀಜ
24. ಕೇಸರಿ
25. ವನಿಲ
26. ತೇಜಪತ್ರ.

* * * * *